**ದಿನಾಂಕಃ 16.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ**

**1.** 2 ಬೈಕ್‌ಗಳ ನಡುವೆ ಅಪಘಾತ ಸಂಭವಿಸಿತ್ತು. ನನ್ನ ಗಂಡ ಬೈಕ್ ಚಾಲನೆ ಮಾಡುತ್ತಿದ್ದರು. ನನ್ನ ಗಂಡನ ವಾಹನದ ದಾಖಲೆ ಗಳನ್ನು ಹಾಜರುಪಡಿಸಲಾಗಿದೆಯೆ ಎಂದರೆ ಗೊತ್ತಿಲ್ಲ. ಟಿ ಬಿ ಕ್ರಾಸ್ ಗೆ ಕೂಲಿ ಕೆಲಸಕ್ಕೆ ಹೋಗಿದ್ದು, ದಾಖಲೆ ಹಾಜರುಪಡಿಸಿಲ್ಲ. ಅಪಘಾತ ಸಮಯದಲ್ಲಿ ನನ್ನ ಹೆಲ್ಮೆಟ್ ಧರಿಸಿರಲಿಲ್ಲ. ನಾನು ಅಪಘಾತ ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ಅಪಘಾತದ ವಿಷಯ ನಮ್ಮೂರಿನವರಿಂದ ಮಧ್ಯಾಹ್ನ 3-00 ಗಂಟೆ ಗೊತ್ತಾಯಿತು. ಅಪಘಾತ ಆದ ನಂತರ ನಾನು ಸ್ಥಳಕ್ಕೆ ಹೋಗಿ ನಂತರ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಯಿಂದ ಸೆವಿನ್ ಹಿಲ್ಸ್ ಕರೆದುಕೊಂಡು ಹೋಗಿದ್ದೆ. ಅಲ್ಲಿ ಒಂದು ಒಳರೋಗಿ ಆಗಿದ್ದರು. ಅಪಘಾತ 12 ಗಂಟೆಗೆ ಸಂಭವಿಸಿತ್ತು. ನನ್ನ ಗಂಡನಿಗೆ ಕುಡಿಯುವ ಅಭ್ಯಾಸ ಇತ್ತು. ನನ್ನ ಗಂಡ ಕುಡಿದ ಮತ್ತಿನಲ್ಲಿ ಹೋಗಿ ಇನ್ನೊಂದು ಬೈಕಿಗೆ ಡಿಕ್ಕಿ ಮಾಡಿಕೊಂಡು ಆತನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

2. ಆಸ್ಪತ್ರೆಯ ಖರ್ಚು ಎಷ್ಟು ಆಗಿರುತ್ತದೆ ಎಂದು ಗೊತ್ತಿಲ್ಲ. ಸಾಲ ಮಾಡಿ ಹಣ ಕಟ್ಟಿರುತ್ತೇನೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಇಬ್ಬರು ಗಂಡು ಮಕ್ಕಳು. ಅಪಘಾತದ ಸಮಯದಲ್ಲಿ ಅಪ್ರಾಪ್ತ ವಯಸ್ಕರಾಗಿದ್ದರು. ಒಬ್ಬ ಹುಡುಗ ಓದುತ್ತಿದ್ದ, ಇನ್ನೊಬ್ಬ ಕೂಲಿ ಕೆಲಸ ಹೋಗುತ್ತಿದ್ದನು.

3. ನನ್ನ ಗಂಡನ ಬಳಿ ಡಿ.ಎಲ್ ಇರಲಿಲ್ಲ. ಹಿಗಾಗಿ ಅಪಘಾತ ನನ್ನ ಗಂಡನಿಂದ ಅಪಘಾತ ಆಗಿರುವುದರಿಂದ 2ನೇ ಎದುರುದಾರುರ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 1ನೇ ಎದುರುದಾರರ ಪರ ವಕೀಲರಿಂದಃ**

4. ಮಾಲೀಕನೊಂದಿಗೆ ರಾಜೀ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಅಪಘಾತ ಸಂಬಂಧ 1ನೇ ಎದುರುದಾರರ 40 ಸಾವಿರ ಹಣ ಚೆಕ್ ಮುಖಾಂತರ ನನಗೆ ಕೊಟ್ಟಿರುತ್ತಾರೆಂದರೆ ಸರಿ. ಹಣ ಪಡೆದಿದ್ದರೂ ಕೂಡ ಹೆಚ್ಚಿ ನ ಪರಿಹಾರ ಹಣ ಪಡೆದುಕೊಳ್ಳುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಎಲ್ಲಾ ಕಾರಣದಿಂದ 1ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**